ಕಾಫಿ ಯಾರು ಮಾಡುತ್ತಿದ್ದರು? ನಾನಾ, ಅವನಾ? ಇಲ್ಲ, ಇಬ್ಬರೂ ಸೇರಿ ಕಾಫಿಗೆ ಹಾಲಿಟ್ಟು, ಮತ್ತೆ ಕಾಫೀ ಡಿಕಾಕ್ಷನ್, ಒಂದು ಚಮಚ ಸಕ್ಕರೆ ಬೆರೆಸಿ, ಕಲಕುತ್ತ... ಕಲಕುತ್ತ... ಕುಲು – ಕುಲು ಮಾತಾಡುತ್ತಾ ಹೀಗೆ ಅವನ ಸೋಫಾದಲ್ಲಿ ಆರಾಮವಾಗಿ ಕುಳಿತು ಕಾಫೀ ಕುಡಿಯುತ್ತಿದ್ದೆವಾ? ಫೇಸ್‌ಬುಕ್‌ನಲ್ಲಿ ಚರ್ಚಿಸುವಂತೆ ಯಾವ ಯಾವ ವಿಷಯವನ್ನು ನನ್ನೊಂದಿಗೆ ಚರ್ಚಿಸುತ್ತಿದ್ದ ಅವನು? ನಮ್ಮ ಮಾತಿನಲ್ಲಿ ಅವನು ಯಾವತ್ತೂ ಓದದೇ ಇದ್ದ ಕವಿತೆಗಳದ್ದಾ? ಕತೆಗಳದ್ದಾ? ಯಾವ ವಿಷಯವಿರುತ್ತಿತ್ತು? ಯಾವ ನೆನಪೂ ಇಲ್ಲ ಅಂಥದ್ದು...

ಈ ಫ್ಲ್ಯಾಟ್ ಕಟ್ಟಿದ ಬಿಲ್ಡರುಗಳ ಕಾಳಸಂತೆ ವ್ಯವಹಾರ, ಮೊನ್ನೆ ಮೊನ್ನೆ ಗುಲ್ಲೆಬ್ಬಿಸಿದ ಸ್ಯಾಂಡ್ ಮಾಫಿಯಾ ಬಗ್ಗೆ ಹೇಳುತ್ತಿದ್ದನಾ? ಇಲ್ಲ, ತನ್ನ ಬ್ಲಾಗಿನಲ್ಲಿ ಬರೆದುಕೊಂಡ ವಿಷಯಗಳ ಬಗ್ಗೆಯಾ? ಇಲ್ಲ, ಅವನ ಬಾತ್ ರೂಂ ಹಿಂದೆ ನೇತು ಹಾಕಿದ ಯಾವಳದೋ ನೈಟಿ, ಅರ್ಧ ಮುಗಿದ ಹೇರ್ ರಿಮೂವರ್, ಬಿಟ್ಟುಹೋದ ಪ್ಯಾಂಟಿ, ಒಣಗಲು ಹಾಕಿದ ಬಟ್ಟೆಗಳು, ಅಡುಗೆಯವಳು ಮಾಡಿಟ್ಟುಹೋದ ಅಡುಗೆ, ಉಂಡು ಸಿಂಕಿನಲ್ಲಿ ಬಿದ್ದ ಪಾತ್ರೆಗಳು, ಪ್ಲೇಟುಗಳು, ಓದದೇ ಮಡಚಿಟ್ಟ ಬುಕ್ಕು, ಮುದುಡಿದ ಬೆಳಗಿನ ಪೇಪರುಗಳ ರಾಶಿ... ಅಥವಾ ಅವನದೇ ಬೆಡ್‌ರೂಮಿನಲ್ಲಿ ವಿಶಾಲವಾದ ಪಲ್ಲಂಗದಲ್ಲಿ... ನಾವಿಬ್ಬರೂ...

ಕಾಫಿ ಆರಿಹೋಗಿ ಮತ್ತೆ ಬಿಸಿ ಮಾಡುತ್ತಿದ್ದೆವಾ? ಗೊತ್ತಿಲ್ಲ! ಯೋಚಿಸಲೂ ಕೂಡ ಆಗುತ್ತಿಲ್ಲ. ಗಟಗಟ ಕಾಫಿ ಕುಡಿದು ಮುಗಿಸಿದೆ.

'ಶಾಲ್ ವಿ ಗೋ?'

'ಹಾಂ? ಶ್ಯೂರ್.'

ಜಿಮ್ಮಿ ನನ್ನನ್ನು ಪಿಕ್ ಮಾಡಿದ ಅದೇ ಗೇಟ್ ನಂಬರ್ ಎರಡರ ಹತ್ತಿರ ಅದೇ ಜಾಗದಲ್ಲಿ ಗಾಡಿ ತಂದು ನಿಲ್ಲಿಸಿದ. ಇಳಿದುಕೋ ಎನ್ನುವಂತೆ ನೋಡಿದ... ಯಾವ ಭಾವವೂ ಅಲ್ಲಿದ್ದಿಲ್ಲ. ನಾನು ಇಳಿಯುವುದನ್ನೆ ಕಾದುಕೊಂಡವನಂತೆ ಮತ್ತೊಂದು ಸಿಗರೇಟ್ ಹೊತ್ತಿಸುತ್ತಿದ್ದ.

ನಾನಿನ್ನೂ ಬಾಗಿಲು ತೆಗೆದಿರಲಿಲ್ಲ, ಅವನ ಕೈ ಅದುಮಿ ಬೈ ಹೇಳಬೇಕೋ ಬೇಡವೋ, ಸುಮ್ಮನೇ ಬೈ ಹೇಳಲಾ ಎಂದು ಯೋಚಿಸುವಷ್ಟರಲ್ಲೆ ಅವನೇ ನುಡಿದ – 'ನಿಮಗೆ ಇಷ್ಟ ಇರದಿದ್ದರೆ ಡೋಂಟ್ ಎವರ್ ಕಮ್ ಅಗೇನ್.'

'ಆಯಿತು... ಓಕೆ, ಬರಲ್ಲ.'

ಬಾಗಿಲು ದಪ್ಪನೇ ಮುಚ್ಚಿಕೊಂಡು. ಬರ್ರನೇ ದೂಳೆಬ್ಬಿಸಿಕೊಂಡ ಕಾರು ಹಿಂತಿರುಗಿತು.

## ರೇಣುಕಾ ನಿಡಗುಂದಿ

ಕತೆಗಾರ್ತಿ ರೇಣುಕಾ ಧಾರವಾಡದವರು. ಇಪ್ಪತ್ತೈದು ವರ್ಷಗಳಿಗೂ ಹೆಚ್ಚುಕಾಲ ನವದೆಹಲಿಯಲ್ಲಿ ವಾಸ. ಪ್ರಬಂಧ, ಕತೆ, ಕವಿತೆಗಳ ಬರವಣಿಗೆ ಮಾಡಿದ್ದಾರೆ. ನವದೆಹಲಿಯ ಬದುಕಿನ ಚಿತ್ರಣ ಕೊಡುವ 'ದಿಲ್ಲಿ ಡೈರಿಯ ಪುಟಗಳು', ಪಂಜಾಬಿ ಕವಯಿತ್ರಿ ಅಮೃತಾ ಪ್ರೀತಂ ಅವರ ಬದುಕಿನ ಪುಟಗಳ ಬರವಣಿಗೆ 'ಅಮೃತ ನೆನಪುಗಳು' ಅವರ ಪ್ರಕಟಿತ ಪುಸ್ತಕಗಳು. 'ಕಣ್ಣ ಕಣಿವೆ' ಅವರ ಕವಿತೆಗಳ ಸಂಗ್ರಹ. ವಿಮರ್ಶಕ ಪುರುಷೋತ್ತಮ ಬಿಳಿಮಲೆ ಅವರೊಂದಿಗೆ 'ರಾಜಧಾನಿಯಲ್ಲಿ ಕರ್ನಾಟಕ' ಎಂಬ ಪುಸ್ತಕವನ್ನು ಸಂಪಾದಿಸಿದ್ದಾರೆ.